ಅಂಚೆ ಇಲಾಖೆಯಿಂದ ಪೂರ್ಣ ತಿಂಗಳ ವರದಿ ಮಾತ್ರ ಬರುವುದರಿಂದ ದಿನಾಂಕ ೧೫–೧೨–೧೯೮೫ ಮತ್ತು ೧೫–೧೨–೧೯೮೬ರ ಅವಧಿಗೆ ಅಂದರೆ ತಿಂಗಳ ಮಧ್ಯದ ಅವಧಿಗಳಿಗೆ ಪ್ರಗತಿಯ ಅಂಕಿ ದೊರೆಯಂವುದಿಲ್ಲ. ಆದ ಕಾರಣ ೧೯೮೪ ಮತ್ತು ೧೯೮೫ನೇ ಡಿಸೆಂಬರ್ ಅಂತ್ಯದವರೆಗೆ (ಪೂರ್ಣ ತಿಂಗಳಿಗೆ) ಆದ ಸಂಗ್ರಹಣೆಯ ವಿವರಗಳನ್ನು ಈ ಕೆಳಗೆ ನಮೂದಿಸಿದೆ.

(ಕೋಟಿ ರೂಪಾಯಿಗಳಲ್ಲಿ)

| | ಒಟ್ಟು ಸಂಗ್ರಹಣೆ | ನಿವ್ವಳ ಸಂಗ್ರಹಣೆ |
|---|---|---|
| ೧೯೮೪–೮೫ನೇ ಸಾಲಿನಲ್ಲಿ ೩೧–೧೨–೧೯೮೪ರ ವರೆಗೆ ಆದ ಪ್ರಗತಿ | ೧೪೨.೯೨ | ೮೪.೫೩ |
| ೧೯೮೫–೮೬ನೇ ಸಾಲಿನಲ್ಲಿ ೩೧–೧೨–೧೯೮೫ರ ವರೆಗೆ ಆದ ಪ್ರಗತಿ | ೨೫೧.೦೧ | ೧೦೭.೨೧ |
| ೧೯೮೪–೮೫ನೇ ಸಾಲಿನಲ್ಲಿ ಡಿಸೆಂಬರ್ ೧೯೮೪ರ ಸಾಧನೆಗಿಂತ ೧೯೮೫–೮೬ನೇ ಸಾಲಿನಲ್ಲಿ ಡಿಸೆಂಬರ್ ೧೯೮೫ರ ವರೆಗೆ ಸಾಧಿಸಿದ ಶೇಕಡಾವಾರು ಪ್ರಗತಿ. | ೫೪.೬೪% | ೨೬.೮೪% |

## ಗಂಗಾವತಿ ತಾಲ್ಲೂಕಿನ ಹೆಬ್ಬಾಳ ಗ್ರಾಮದ ಬೋಳಾಡಿ ಬಸವೇಶ್ವರ ಏತ ನೀರಾವರಿ ಸಹಕಾರ ಸಂಸ್ಥೆ

೪೯೬. ಶ್ರೀ ಗೌಳಿ ಮಹದೇವಪ್ಪ (ಗಂಗಾವತಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗಂಗಾವತಿ ತಾಲ್ಲೂಕಿನ ಹೆಬ್ಬಾಳ ಗ್ರಾಮದ ಸರಕಾರಿ ಅಧಿಕಾರಿಗಳೇ ಪದಾಧಿಕಾರಿಗಳಾಗಿರುವ ಬೋಳಾಡಿ ಬಸವೇಶ್ವರ ಏತ ನೀರಾವರಿ ಸಹಕಾರಿ ಸಂಘದ ವತಿಯಿಂದ ಕಾಮಗಾರಿ ಪ್ರಾರಂಭವಾಗಿ ೪ ವರ್ಷಗಳಾಗಿದ್ದು ಈ ಕಾಮಗಾರಿ ಪೊಲ್ಯಾಸ್ ಕಂಪನಿಗೆ 'ಟರ್ನ್‌ಕೀ' ಆಧಾರದ ಮೇಲೆ ವಹಿಸಿದ್ದು ನಿಜವೆ.

ಆ) ಈ ಎರಡು ವರ್ಷಗಳ ಹಿಂದೆ ನೀರು ಹಾಯಿಸುವ ಪೈಪುಗಳ ಕೆಲಸ ಮುಗಿಯುವ ಹಂತದಲ್ಲಿದ್ದಾಗ ವಿದ್ಯುತ್ ಪೂರೈಕೆ ಪಡೆದಿದ್ದು ಹಾಗೂ ಆದರ ಉದ್ಘಾಟನೆ ನೀರಾವರಿ ಹಾಗೂ ವಿದ್ಯುತ್ ಇಲಾಖೆ ಕಾರ್ಯದರ್ಶಿಯವರಿಂದ ನೆರವೇರಿದ್ದು ನಿಜವಲ್ಲವೆ,

ಇ) ವಿದ್ಯುತ್ ಪೂರೈಕೆಯಾಗಿ ಎರಡು ವರ್ಷಗಳು ಆಗುತ್ತಾ ಬಂದರೂ ನೀರು ಹಾಯಿಸಬೇಕಾದ ನಳ ಮಾರ್ಗದ ಕಳಪೆ ಗುಣಮಟ್ಟದ ಕೆಲಸ ದಿಂದಾಗಿ ನೀರು ಇನ್ನೂ ಬ್ಯಾಂಕಿಗೆ ಮುಟ್ಟದೆ ಪ್ರತಿ ತಿಂಗಳಿನ ವಿದ್ಯುತ್ ಶುಲ್ಕ ಸುಮಾರು ೨ ಲಕ್ಷದಷ್ಟು ಬಾಕಿಯಾಗಿ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿದ್ದು ಸರಕಾರದವರ ಗಮನಕ್ಕೆ ಬಂದಿದೆಯೆ,

ಈ) ರೈತರ ಭೂಮಿಯನ್ನು ಆಡವು ಹಾಕಿಕೊಂಡು ಸ್ಪೇಟ್ ಬ್ಯಾಂಕಿನ ಬಡ್ಡಿ ವರ್ಷದಿಂದ ವರ್ಷಕ್ಕೆ ಬೆಳೆಯುತ್ತಾ ನೀರಾವರಿ ಸೌಲಭ್ಯವಿಲ್ಲದೆಯೇ ದಂಡ ತೆರಬೇಕಾಗಿ ಬಂದಿರುವ ರೈತರು ಪರಿಹಾರಕ್ಕಾಗಿ ಸರಕಾರವು ಏನು ಕ್ರಮ ತೆಗೆದುಕೊಂಡಿದೆ, ಹಾಗೂ ಈ ಹಾನಿಯ ಹೊಣೆಗಾರರಿಗೆ ಸರಕಾರವು ಯಾವ ಶಿಕ್ಷೆ ಯೋಜಿಸಿದೆ,

ಉ) ಶೇಕಡ ೯೦ರಷ್ಟು ಕೆಲಸ ಮುಗಿದಿರುವ ಈ ಕಾಮಗಾರಿ ಸರ್ಕಾರವು ತಾನೇ ವಹಿಸಿಕೊಂಡು ಮುಗಿಸಿದಲ್ಲಿ ಇದರ ಲಾಭ ಪಡೆಯುವ ೯೦೦ ಎಕರೆ ಪ್ರದೇಶದಲ್ಲಿ ರೈತರು ರಾಜ್ಯಕ್ಕೆ ಭೀಕರ ಬರಗಾಲಕ್ಕೆ ಮೇವು ಬೆಳೆದುಕೊಡಲು ಸಿದ್ಧರಿರುವುದರಿಂದ ಇದರ ಉಪಯೋಗ ಪಡೆಯಲು ಸರ್ಕಾರದವರು ಶೀಘ್ರ ಕ್ರಮ ಕೈಗೊಳ್ಳುವರೇ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ನಿಜ;

ಆ) ನಿಜ.

ಇ) ಬಂದಿದೆ.

ಈ) ಸದರಿ ಕೆಲಸವನ್ನು ''ಟರ್ನ್ ಕೀ'' ಆಧಾರದ ಮೇಲೆ ಮೆ॥ ಪ್ರೋಲ್ಟಾಸ್ ಕಂಪನಿಯವರಿಗೆ ನಿರ್ವಹಿಸಿರುವುದರಿಂದ ಹಾನಿಯು ಹೊಣೆಗಾರಿಕೆ ಅವರದೇ ಆಗಿರುತ್ತದೆ. ನುರಿತ ಕಾರ್ಯಗಳನ್ನು ಗುಣಮಟ್ಟ ಹಾಗೂ ಸಮರ್ಪಕವಾಗಿ ಕಂಪನಿಯವರು ಪೂರ್ಣಗೊಳಿಸದಿದ್ದಲ್ಲಿ ಕಾನೂನಿನ ಪ್ರಕಾರ ಕಂಪನಿಯ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಉ) ಪರಿಶೀಲಿಸಲಾಗುವುದು.

## ಕುರಣಿ ಹಾಗೂ ಕೋಚರಿ ಕಾಲುವೆಗಳ ನಿರ್ಮಾಣ

೧೯೫. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುರಣಿ ಹಾಗೂ ಕೋಚರಿ ಕಾಲುವೆಗಳ ನಿರ್ಮಾಣದಲ್ಲಿ ತಡವಾಗುತ್ತಲಿರುವುದಕ್ಕೆ ಕಾರಣವೇನು,

ಆ) ಸದರಿ ಕಾಲುವೆಗಳಿಂದ ಆಗುವ ನೀರಾವರಿ ಕ್ಷೇತ್ರವೆಷ್ಟು,

ಇ) ಈ ಎರಡೂ ಕಾಲುವೆಗಳ ಯಾತ ನೀರಾವರಿ ಕಾಲುವೆಗಳ ನಿರ್ಮಾಣದಲ್ಲಿನ ತೊಂದರೆಗಳನ್ನು ಸರಿಪಡಿಸಲು ಸರ್ಕಾರದಿಂದ ತೀವ್ರಕ್ರಮ ಕೈಕೊಳ್ಳುವುದಕ್ಕಾಗಿ ತೆಗೆದುಕೊಂಡಿರುವ ಕಾರ್ಯಕ್ರಮಗಳೇನು,

ಈ) ಕೋಚರಿ ಯಾತ ನೀರಾವರಿ ಕಾಲುವೆಯ ಗಾತ್ರವನ್ನು ಅಗಲಗೊಳಿಸಿ ಶ್ರೀ ಹಿರಣ್ಯಕೇಶಿ ನದಿಯ ಮೇಲಿರುವ ಗೋಟೂರ ಪೇರದವರೆಗೆ ಕಾಲುವೆಯನ್ನು ಮುಂದುವರಿಸಲು ತಡವಾಗುತ್ತಿರುವುದಕ್ಕೆ ಕಾರಣವೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಪ್ರಮುಖವಾಗಿ ಭೂ ಸ್ವಾಧೀನ ಸಮಸ್ಯೆಗಳು ಮತ್ತು ಕೆಲವು ಭೂ ಮಾಲೀಕರು ನಾ ಯಾಲಯಕ್ಕೆ ಹೋಗಿರುವುದರಿಂದ ಸ್ವಲ್ಪ ವಿಳಂಬವಾಗಿದೆ.

ಆ) ೧. ಕುರಣಿ ಫ್ಲೋ ಕಾಲುವೆಯಿಂದ ... ೬೮೮ ಹೆಕ್ಟೇರು

೨. ಕುರಣಿ ಯಾತ ನೀರಾವರಿ ಕಾಲುವೆ

ಮೊದಲನೆಯ ಹಂತ ... ೧೮೨೧ ಹೆಕ್ಟೇರು

ಎರಡನೇಯ ಹಂತ ... ೧೪೧೭ ಹೆಕ್ಟೇರು

ಮೂರನೇಯ ಹಂತ ... ೫೬೭ ಹೆಕ್ಟೇರು

ನಾಲ್ಕನೆಯ ಹಂತ ... ೩೪೮ ಹೆಕ್ಟೇರು

೩. ಕೋಚರಿ ಫ್ಲೋ ಕಾಲುವೆ ... ೫೩೪ ಹೆಕ್ಟೇರು

೪. ಕೋಚರಿ ಯಾತ ಕಾಲುವೆ ... ೧೪೬೫ ಹೆಕ್ಟೇರು

ಇ ಈ ಕಾಲುವೆಗಳ ನಿರ್ಮಾಣ ಕಾರ್ಯಗಳು ಯೋಚಿಸಿದಂತೆ ಪೂರ್ತಿಗೊಳಿಸಲು ಸರ್ವ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಈ) ಅನ್ವೇಷಣಾ ಹಂತದಲ್ಲಿದೆ.